



ಆದರೆ ಇತ್ತೀಚಿನ ವರ್ಷಗಳಲ್ಲಿ ಕರಾವಳಿಯ ಉದ್ದಕ್ಕೂ ನೂರಾರು ಭೂತಗಳ ಗುಡಿಗಳು ಜೀರ್ಣೋದ್ಧಾರಗೊಂಡಿವೆ. ಮೇಲ್ಜಾತಿಯ ದೇವಾಲಯಗಳನ್ನೂ ನಾಚಿಸುವಂತಹ ಕಟ್ಟಡಗಳಲ್ಲಿ ಭೂತಗಳನ್ನು ಪ್ರತಿಷ್ಠಾಪಿಸಿ ಅದ್ದೂರಿಯ ಬ್ರಹ್ಮಕಲಶಗಳನ್ನು ನೆರವೇರಿಸಲಾಗಿದೆ. ಭೂತದ ಕೋಲಗಳ ವೈಭವ ಮರುಕಳಿಸುತ್ತಿದೆ. ಕಾಲಿಗೆ ಕಟ್ಟುವ ಗಗ್ಗರದ ನಾದ, ತಾಸೆ, ವಾಲಗಗಳ ಮೇಳ, ಸಿಡಿಮದ್ದುಗಳ ಆರ್ಭಟ ಅನುರಣಿಸತೊಡಗಿದೆ. ತೆಂಗಿನ ಸೂಟೆ, ಪೆಟ್ರೋಮ್ಯಾಕ್ಸಿನ ಬೆಳಕಿನಲ್ಲಿ ನಡೆಯುತ್ತಿದ್ದ ಕೋಲಗಳಿಗೂ ಇತ್ತೀಚೆಗೆ ವಿದ್ಯುದ್ದೀಪಾಲಂಕಾರಗಳು ಮೆರುಗು ನೀಡತೊಡಗಿವೆ.

ಹಾಗೆಯೇ ಭೂತದ ಪಾತ್ರಧಾರಿಗಳಲ್ಲೂ ಕಾಲ ಸಹಜವಾದ ಬದಲಾವಣೆಗಳು ಎದ್ದು ಕಾಣುತ್ತಿವೆ. ಹಿಂದಿನ ಕಾಲದಲ್ಲಿದ್ದಂತೆ ಅವರು ಹೇಳಿ ಕಳುಹಿಸಿದರೆ ಓಡಿಬಂದು ಭೂತ ಕಟ್ಟಿ ನಲಿಯುವ ಪರಂಪರೆ ಈಗ ಇಲ್ಲ. ಅವರ ಬಿಡುವಿನ ದಿನವನ್ನು ತಿಳಿದುಕೊಂಡು ಕೋಲ ನಿರ್ಧರಿಸಬೇಕು. ಪಾತ್ರಧಾರಿಯ ಸಂಭಾವನೆ ಮೊದಲಿನಂತೆ ಸೇರಕ್ಕಿಯ ಅನ್ನವಲ್ಲ, ಮೂರು ಸಾವಿರ ರೂಪಾಯಿಗಳಿಂದ ಆರಂಭಿಸಿ ಹತ್ತಾರು ಸಾವಿರ ರೂಪಾಯಿಗಳಷ್ಟಿದೆ. ಹೆಚ್ಚು ಭೂತಗಳಿಗೆ ಕೋಲಗಳಿದ್ದರೆ ಬೇರೆಯವರನ್ನು ಕರೆತರುವ ಹೊಣೆಗಾರಿಕೆಯನ್ನು ಒಬ್ಬನೇ ವಹಿಸಿಕೊಂಡು ಅದನ್ನು ಗುತ್ತಿಗೆಯ ರೂಪದಲ್ಲಿ ಪಡೆಯುವುದೂ ಇದೆ. ವಾಲಗ ಊದುವವರು ಒಬ್ಬ ಪಾತ್ರಧಾರಿಗೆ ಯಾರಾಗಬೇಕೆಂಬುದನ್ನೂ ಅವನೇ ಆಯ್ಕೆ ಮಾಡಿ ಕರೆ ತರುವ ಕ್ರಮ ಈಗಿನದು.

ಕಾಲಕ್ಕೆ ತಕ್ಕ ಬದಲಾವಣೆಯೂ ಆಗಿದೆ. ಭೂತ ಕಟ್ಟುವವರಲ್ಲಿ ಹೊಸ ಪರಂಪರೆಯವರು ವಿದ್ಯಾವಂತರು. ಸಿನಿಮಾ ಮತ್ತು ಯಕ್ಷಗಾನಗಳಿಂದ ಸಾಕಷ್ಟು ಪ್ರಭಾವಿತರು. ಈಗೀಗ ಅವರಿಗೆ ವಾಲಗ ಊದುವವರು ಹಳೆಯ ಜನಪದ ಶೈಲಿಯಲ್ಲಿ ನುಡಿಸಿದರೆ ಇಷ್ಟವಾಗುವುದಿಲ್ಲ. ಅರ್ಜುನ್ ಜನ್ಯ, ರೆಹಮಾನರಂತಹ ಸಂಗೀತ ನಿರ್ದೇಶಕರ ಹಾಡುಗಳ ಸಂಗೀತವನ್ನೇ ನುಡಿಸಬೇಕೆಂದು ಮೊದಲೇ ಸೂಚನೆ ಕೊಡುವ ಪಾತ್ರಿಗಳೂ ಇದ್ದಾರೆ. ಅದಕ್ಕೆ ತಕ್ಕಂತೆ ಸಿನಿಮಾ ಸ್ಟೈಲಿನ ಕುಣಿತವೂ ಕಾಣಸಿಗುತ್ತದೆ. ಕೆಲವರು ಯಕ್ಷಗಾನದ ನೃತ್ಯವನ್ನೇ ಅಲ್ಲಿ ತೋರಿಸುವುದುಂಟು. ಇತ್ತೀಚೆಗೆ ಒಬ್ಬ ಭೂತ ಕಲಾವಿದ ಕೊಳಲು ವಾದಕರನ್ನು ಕರೆಸಿ ಅದರ ನಾದಕ್ಕೆ ತಕ್ಕಂತೆ ಕುಣಿದು ಹೊಸ ಪರಂಪರೆಗೆ ಭಾಷ್ಯ ಬರೆದಿದ್ದ.

ಮುಖವರ್ಣಿಕೆ, ವೇಷ ಪರಿಕರಗಳೂ ಬದಲಾಗಿವೆ. ಜನಪದೀಯ ವಿಧಾನದಲ್ಲಿ ಬಳಸುತ್ತಿದ್ದ ಅರ್ದಳ ಮರದ ಹಳದಿ ಮೇಣದ ಬದಲು ಮುಖವರ್ಣಿಕೆಯ ಬಣ್ಣದ ಹುಡಿಗಳು ಬಳಕೆಯಾಗುತ್ತಿವೆ. ಯಕ್ಷಗಾನ ವೇಷಧಾರಿಯ ರೀತಿಯಲ್ಲೇ ವೈವಿಧ್ಯಮಯವಾದ ಪಾತ್ರಗಳು ಸೃಷ್ಟಿಯಾಗುತ್ತಿವೆ. ತುಳು ಭಾಷೆಯನ್ನೇ ಆಡುತ್ತಿದ್ದ ದೈವಗಳ ನುಡಿಯಲ್ಲಿ ಇತ್ತೀಚೆಗೆ ಆಂಗ್ಲ ಪದಗಳೂ ಸೇರಿಕೊಳ್ಳುತ್ತಿವೆ. ಭೂತದ ಉಗ್ರ ರೂಪ ತೋರಿಸಲು ಪ್ಲಾಸ್ಟಿಕ್ ಚಾಪೆಯನ್ನು ಹಲ್ಲಿನಿಂದ ಕಚ್ಚಿ ಚೂರು ಮಾಡುವುದು, ಜೀವಂತ ಕೋಳಿಗಳನ್ನು ಕಚ್ಚಿ ರಕ್ತ ಹೀರುವುದು, ಎಣ್ಣೆಯ ಬಟ್ಟಲನ್ನು ತಲೆಗೆ ಗುದ್ದಿಕೊಂಡು ಮುದ್ದೆ ಮಾಡುವುದೇ ಮೊದಲಾದ ಪ್ರದರ್ಶನಗಳ ಮೂಲಕ ಪಾತ್ರಧಾರಿಗಳು ಹೊಸತನದ ಅಲೆಯನ್ನು ಹರಡುತ್ತಿದ್ದಾರೆ. ಹಳೆಯ ಸ್ವರೂಪವನ್ನು ಕೊಡಹಿ ಈ ಜನಪದ ಕಲೆ ಹೊಸದರ ಆವಾಹನೆಗೆ ಸಿದ್ಧಗೊಳ್ಳುತ್ತಿದೆ. ಕಾಲ ಬದಲಾದಂತೆ ಕೋಲ ಬದಲಾಗುತ್ತಿದೆ.